ಅಡುಗೆ ಅನಿಲ ಸಿಲಿಂಡರ್‌ಗಳ ವಶ

ಸಂಕ ಸಮಾಚಾರ ಚನ್ನಪಟ್ಟಣ

ಅಕ್ರಮವಾಗಿ ಅಡುಗೆ ಸಿಲಿಂಡರ್ ಗಳಿಂದ ರಿಫಿಲಿಂಗ್ ಮಾಡಿ ಆಟೋ ಹಾಗೂ ವಾಣಿಜ್ಯ ಉದ್ದೇಶಕ್ಕೆ ಮಾರಾಟ ಮಾಡುತ್ತಿದ್ದ ಅಂಗಡಿಯ ಮೇಲೆ ದಾಳಿ ಮಾಡಿದ ತಾಲ್ಲೂಕು ದಂಡಾಧಿಕಾರಿ ಹಾಗೂ ಸಿಬ್ಬಂದಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 15 ಅಡುಗೆ ಸಿಲಿಂಡರ್‌ಗಳನ್ನು ವಶಪಡಿಸಿಕೊಂಡಿರುವ ಘಟನೆ ಪಟ್ಟಣದ ಸಾತನೂರು ಸರ್ಕಲ್ ಬಳಿಯ ತಾಜ್ ಹೋಟೆಲ್ ಮುಂಭಾಗದ ಗಲ್ಲಿಯಲ್ಲಿ ನಡೆದಿದೆ.

ಮನೆ ಬಳಕೆಯ ಎಚ್.ಪಿ. ಸಿಲಿಂಡರ್‌ಗಳನ್ನು ಕಮರ್ಷಿಯಲ್‌ಗೆ ಬದಲಾಯಿಸಿಕೊಂಡು ಮಾರಾಟ ಮಾಡುತ್ತಿರುವುದರ ಬಗ್ಗೆ ಮಾಹಿತಿ ಪಡೆದ ತಾಲ್ಲೂಕು ದಂಡಾಧಿಕಾರಿ ಸುದರ್ಶನ್, ಕಂದಾಯ ನಿರೀಕ್ಷಕ ಕಾಂತರಾಜು, ಆಹಾರ ನಿರೀಕ್ಷಕಿ ಮೊನಿಶಾ ಹಾಗೂ ಸಿಬ್ಬಂದಿಗಳಾದ ನಾಗರಾಜು, ಪ್ರತಾಪ್, ಶಿವು ಹಾಗೂ ಸಿಬ್ಬಂದಿ ದಾಳಿ ನಡೆಸಿದ್ದಾರೆ.

ಮಮ್ತಾಜ್ ಎಂಬುವರಿಗೆ ಸೇರಿದ ಅಂಗಡಿಯಲ್ಲಿ ಈ ರೀತಿಯ ಅಕ್ರಮ ರಿಫಿಲಿಂಗ್ ನಡೆಯುವಾಗ ದಾಳಿ ಮಾಡಿದ ದಂಡಾಧಿಕಾರಿಗಳು ಅಕ್ರಮ ಸಿಲಿಂಡರ್‌ಗಳನ್ನು ವಶಪಡಿಸಿಕೊಂಡು, ಆಹಾರ ನಿರೀಕ್ಷರ ವಶಕ್ಕೆ ನೀಡಿದ್ದಾರೆ.

ಅಂಗಡಿ ಮಾಲೀಕನ ಮೇಲೆ ಪ್ರಕರಣ ದಾಖಲಾಗಿದೆ. ಕೆಲ ತಿಂಗಳುಗಳಿಂದ ನಾಯಿಕೊಡೆಗಳಂತೆ ಅಕ್ರಮ ಗ್ಯಾಸ್ ರಿಫಿಲಿಂಗ್ ಕೇಂದ್ರಗಳು ಗರಿ ಬಿಚ್ಚಿದ್ದು, ಲೀಲಾಜಾಲವಾಗಿ ಅಡುಗೆ ಸಿಲಿಂಡರ್‌ಗಳನ್ನು ಖರೀದಿ ಮಾಡಿಕೊಂಡು, ಕಮರ್ಷಿಯಲ್‌ಗೆ ಬದಲಾಯಿಸಿ ಹೆಚ್ಚು ಲಾಭಕ್ಕೆ ಮಾರಾಟ ಮಾಡುತ್ತಿರುವುದಾಗಿ ಕೇಳಿ ಬಂದಿದೆ.

ಅಲ್ಲದೆ ಅಕ್ರಮ ರಿಫಿಲಿಂಗ್ ದಂಧೆಗೆ ಕೆಲ ಅಧಿಕಾರಿಗಳೇ ಶಾಮೀಲಾಗಿದ್ದಾರೆನ್ನಲ್ಲಾಗಿದ್ದು, ಮೊದಲು ತಮ್ಮ ಇಲಾಖೆಯಲ್ಲಿರುವ ಭ್ರಷ್ಟ ಅಧಿಕಾರಿಗಳನ್ನು ಪತ್ತೆಹಚ್ಚಿ ದಂಡಾಧಿಕಾರಿಗಳು ಬುದ್ಧಿ ಕಲಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ವಿಶೇಷಚೇತನರಿಗೆ ಬೋಧಿಸುವುದೆ ಸಾಧನೆ

ಸಂಕ ಸಮಾಚಾರ ನೆಲಮಂಗಲ

ನಮ್ಮ ದೇಶದಲ್ಲಿ ಅನೇಕ ಮಕ್ಕಳು ವಿಕಲಚೇತನರಿದ್ದಾರೆ ಇಲ್ಲಿ ಶಾಲೆಗೆ ಸೇರಿರುವ ಮಕ್ಕಳಿಗೆ ಅವರಿಗೆ ಉತ್ತಮ ಅಭ್ಯಾಸ ಮತ್ತು ಅವರ ನಡವಳಿಕೆಯನ್ನು, ಸರಿ ಮಾಡಲು ಧರಿತ್ರಿ ಸಂಸ್ಥೆ ಅಪಾರ ಶ್ರಮ ವಹಿಸಿ ನಿರ್ವಹಿಸುತ್ತಿದೆ ಎಂದು ನರಸೀಪುರ ಗ್ರಾ.ಪಂ. ಅಧ್ಯಕ್ಷ ಗ.ನಾಗರಾಜು ತಿಳಿಸಿದರು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲ್ಲೂಕಿನ ಸೋಂಪುರ ಹೋಬಳಿಯ ನರಸೀಪುರದ ಧರಿತ್ರಿ ವಿಶೇಷ ಮಕ್ಕಳ ವಾರ್ಷಿಕೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಶಾಲೆಯಲ್ಲಿ ಅನೇಕರು ಬುದ್ಧಿಮಾಂದ್ಯ ಮಕ್ಕಳು ಹಾಗೂ ವಿಶೇಷಚೇತನವುಳ್ಳ ಮಕ್ಕಳು ವಯಸ್ಸಾದವರಿದ್ದಾರೆ. ಅವರಿಗೆ ಈ ಸಂಸ್ಥೆಯಲ್ಲಿ ಪಾಠ ಮಾಡುವುದೊಂದು ಸಾಧನೆಯಾಗಿದೆ ಅಂತಹುದರಲ್ಲಿ ಇಲ್ಲಿನ ಮಕ್ಕಳನ್ನು, ಒಟ್ಟಿಗೆ ಕೂಡಿಸಿ, ಅವರಿಗೆ ಯೋಗ ಮತ್ತು ಅವರಿಗೆ ತಕ್ಕಂತಹ ಪ್ರವಚನ ಹೇಳಿಕೊಡಲಾಗುತ್ತಿದೆ ಎಂದರು.

ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ನರಸೀಪುರದ ಧರಿತ್ರಿ ವಿಶೇಷ ಮಕ್ಕಳ ವಾರ್ಷಿಕೋತ್ಸವ ಕಾರ್ಯಕ್ರಮ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆಯಿತು.

ಜಿಲ್ಲಾ ವಿಕಲಚೇತನ ಕಲ್ಯಾಣ ಅಧಿಕಾರಿ ಗೌತಮ್ ರಾಜ್ ಮಾತನಾಡಿ, ನಮ್ಮ ಸಂಸ್ಕೃತಿ ಆಚಾರ ವಿಚಾರಗಳು ಬೇರೆ ಬೇರೆ ದೇಶದ ಜನರಿಗೆ ಆದರ್ಶವಾಗುವ ಮನುಷ್ಯ ತನ್ನ ಜೀವಿತಾವಧಿಯಲ್ಲಿ ಮತ್ತೊಬ್ಬರಿಗೆ ಸಹಾಯ ಮಾಡಿದರೆ ಅವರ ದೃಷ್ಟಿಯಲ್ಲಿ ಆತನೆ ದೇವರಾಗಿರುತ್ತಾನೆ ತಿಳಿಸಿದರು.

ಉದ್ಯಮಿ ಶಿವರಾಮ್, ಅಮೇರಿಕಾದ ನ್ಯೂಜೆರ್ಸಿಯ ಅಭಿಯಂತರ ಬಿ.ಆರ್. ರಾಮಪ್ರಸಾದ್, ಧರಿತ್ರಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್‌ಬೆಟಗೇರಿ ಮಾತನಾಡಿದರು.ಸೋಂಪುರ ಜಿಪಂ ಸದಸ್ಯ ನಂಜುಂಡಯ್ಯ, ನರಸೀಪುರ ಗ್ರಾ.ಪಂ. ಉಪಾಧ್ಯಕ್ಷರಾದ ಕಾಂತಮ್ಮ ಗಂಗರಾಜು, ಸದಸ್ಯ ಸಿ.ಮಹೇಶ್, ನರಸೀಪುರ ಡೇರಿ ಅಧ್ಯಕ್ಷ ರಾಮಗಿರಿಗೌಡ, ಹರೀಶ್, ಧರಿತ್ರಿ ಶಾಲಾ ಮುಖ್ಯ ಶಿಕ್ಷಕ ರಂಗನಾಥ ಇತರರಿದ್ದರು.

kotak

ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್.,

ನೋಂದಾಯಿತ ಕಛೇರಿ: 27 ಬಿಕೆಸಿ, ಸಿ27, ಜಿ ಬ್ಲಾಕ್, ಬಾಂದ್ರ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರ (ಪೂ) ಮುಂಬೈ, ಮಹಾರಾಷ್ಟ್ರ- 400 051.
ಶಾಖಾ ಕಛೇರಿ: ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್ , [illegible] ನಂ. 22, [illegible] ಬೆಂಗಳೂರು- 560 001, [illegible]

ಸ್ಥಿರಾಸ್ತಿ ಮಾರಾಟಕ್ಕಾಗಿ ಮಾರಾಟ ಸೂಚನೆ

ಭದ್ರತಾ ಹಿತಾಸಕ್ತಿ (ಜಾರಿ) 2002'ರ ನಿಯಮಗಳ ನಿಯಮ 8(5) ಪ್ರಾವಿಸೋ ನಿಯಮ 9ರೊಂದಿಗೆ ಓದಿಕೊಂಡಂತೆ 2002 ರ ಹಣಕಾಸು ಆಸ್ತಿಗಳ ಭದ್ರತೆ ಹಾಗೂ ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು ಮಾರಾಟ ಸೂಚನೆ.

ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರು ಮತ್ತು ಜಾಮೀನುದಾರರಿಗೆ ಮತ್ತು ಕೆಳಕಂಡ ಕೋಷ್ಟಕದಲ್ಲಿ ವಿವರಿಸುವವರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಕೆಳಕಂಡ ಸ್ಥಿರಾಸ್ತಿಯು ಅಡಮಾನ/ಚಾರ್ಜ್ ಆಗಿರುತ್ತದೆ ಮತ್ತು ಕಳಕಂಡಂತೆ, ಅಧಿಕೃತ ಅಧಿಕಾರಿ, ಕೋಟಕ್ ಮಹೀಂದ್ರ ಬ್ಯಾಂಕ್ ಲಿ.(ಭದ್ರತಾ ಸಾಲದಾತರು)ರವರು ದಿನಾಂಕ 28.03.2018 ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ, ಮತ್ತು ಬ್ಯಾಂಕ್‌ನ ಬಾಕಿ ಮೊತ್ತ ವಸೂಲಾತಿಗಾಗಿ "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ", ಮತ್ತು "ಏನೆಲ್ಲ ಇದೆಯೋ ಹಾಗೆ" ಆಧಾರದಲ್ಲಿ ಮಾರಾಟ ಮಾಡಲಾಗುವುದು.

ಸ್ಥಿರಾಸ್ತಿಯ ಜೊತೆಗೆ ಎನ್‌ಕಂಬರೆನ್ಸ್ ವಿವರಗಳು, ಇದ್ದಲ್ಲಿ:

ಭೂಮಿ ಮತ್ತು ನಿರ್ಮಿತ ಮನೆ, ನಿವೇಶನ ನಂ.76, ಪ್ರಸ್ತುತ ಖಾತಾ ನಂ.397/76, ಕೆಸ್ಟೋಡಿಂಗ್ ಮಿಯಾಡೋಸ್-4, ಖಾತಾ ನಂ.161, (ಈ ಹಿಂದಿನ ಮನೆ ಪಟ್ಟಿ ಖಾತಾ ನಂ.119/4) ಮಾರಗೊಂಡನಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಈ ಮೊದಲಿನ ದಕ್ಷಿಣ ತಾಲ್ಲೂಕು, ವಿಸ್ತೀರ್ಣ ಪೂರ್ವಕ್ಕೆ 58'3", ಪಶ್ಚಿಮಕ್ಕೆ 43'6", ಉತ್ತರಕ್ಕೆ 61'10" ಮತ್ತು ದಕ್ಷಿಣಕ್ಕೆ 61'3" ವಿಸ್ತೀರ್ಣ 3115 ಚದರ ಅಡಿ, ಜೊತೆಗೆ ನಿರ್ಮಿತ ಕಟ್ಟಡ [illegible], ಜೊತೆಗೆ ಎಲ್ಲಾ ಹಕ್ಕುಗಳು, ಅಪ್ಪರ್‌ಟೆನೆನ್ಸ್, ಮತ್ತು [illegible] ಮೇಲ್ಛಾವಣಿ ಮತ್ತು ಕೆಳದ್ದು ಒಳಗೊಂಡಂತೆ, ಚಕ್ಕುಬಂದಿ: ಪೂರ್ವಕ್ಕೆ ಖಾಸಗಿ ಆಸ್ತಿ, ಪಶ್ಚಿಮಕ್ಕೆ ಖಾಸಗಿ ಆಸ್ತಿ, ಉತ್ತರಕ್ಕೆ ಪ್ಲಾಟ್ ನಂ.83/2, ದಕ್ಷಿಣಕ್ಕೆ ಪ್ಲಾಟ್ ನಂ.77.

ಸಾಲಗಾರರು ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ	1.ಇ-ಹರಾಜಿನ ದಿನಾಂಕ ಮತ್ತು ಸಮಯ 2.ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ 3.ಸ್ಥಿರಾಸ್ತಿಯ ಪರಿವೀಕ್ಷಣೆ ದಿನಾಂಕ ಮತ್ತು ಸಮಯ	1.ಮೀಸಲು ಬೆಲೆ 2.ಸ್ಥಿರಾಸ್ತಿಯ ಇಎಂಡಿ 3. ಬಿಡ್ ಗುಣಾಂಕ
ಶ್ರೀ ಎಸ್ ನಾಗಭೂಷಣ್ ಬಿನ್ ಶ್ರೀ ಎಂ ಶಂಕರ್ ಮತ್ತು **ಶ್ರೀಮತಿ ಕೆ ಯಶೋಧಾ** ಕೋಂ ಶ್ರೀ ಎಸ್ ನಾಗಭೂಷಣ್, ಇವರುಗಳ ವಿಳಾಸ: 3367/8, 1ನೇ ಮಹಡಿ, 13ನೇ ಮೈನ್, ಹೆಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು-560008, ಇವರುಗಳ ವಿಳಾಸ: ನಂ.119/4, ಕೆಸ್ಟೋಡಿಂಗ್ ಮಿಯಾಡೋಸ್-4 ಮಾರಗೊಂಡನಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, [illegible]-560036, ಶ್ರೀ ಎಸ್ ನಾಗಭೂಷಣ್ ಬಿನ್ ಶ್ರೀ ಎಂ ಶಂಕರ್ ಮತ್ತೊಂದು ವಿಳಾಸ: ನಂ.119/4, C/o ಕೆಸ್ಟೋಡಿಂಗ್ [illegible] ಬಾರ್ ಅಂಡ್ ರೆಸ್ಟೋರೆಂಟ್, 405/155, [illegible], ಇಂದಿರಾನಗರ, ಬೆಂಗಳೂರು-560008. **ಸಾಲ ಖಾತೆ ಸಂಖ್ಯೆ: 12276223 & 12276405** **ಒಟ್ಟು ಬಾಕಿ ಮೊತ್ತ: ರೂ.1,95,68,316/-** (ರೂಪಾಯಿ ಒಂದು ಕೋಟಿ ತೊಂಭತ್ತೈದು ಲಕ್ಷದ ಅರವತ್ತೆಂಟು ಸಾವಿರದ ಮುನ್ನೂರ ಹದಿನಾರು) **ದಿನಾಂಕ 21.01.2020**ರಂದು ಇದ್ದಂತೆ ಜೊತೆಗೆ ಪಾವತಿಸದಿರುವ ಅನ್ವಯಿಸುವ ಮತ್ತು ಸಾಲ ಕರಾರಿನಂತೆ ಒಪ್ಪಂದದ ದರದಂತೆ ಬಡ್ಡಿ ಜೊತೆಗೆ ಎಲ್ಲಾ ಶುಲ್ಕ, ವೆಚ್ಚ ಮತ್ತು ವೆಚ್ಚಗಳು.	1)ಇ-ಹರಾಜು ದಿನಾಂಕ: 18 ಫೆಬ್ರವರಿ, 2020, ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆಯವರೆಗೆ ಜೊತೆಗೆ 5 ನಿಮಿಷಗಳ ಅನಿಯಮಿತ ಸಮಯಾವಕಾಶ. 2) ಕೆವೈಸಿ ಜೊತೆಗೆ ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ: 17ನೇ ಫೆಬ್ರವರಿ 2020, ಸಂಜೆ 5.00(ಐಎಸ್‌ಟಿ) ಗಂಟೆಯವರೆಗೆ. 3) ಪರಿವೀಕ್ಷಣೆಯ ದಿನಾಂಕ: 07 ಫೆಬ್ರವರಿ 2020, ಬೆಳಗ್ಗೆ 11.00 ಗಂಟೆಯಿಂದ ಸಂಜೆ 04.00 ಗಂಟೆಯವರೆಗೆ (ಐಎಸ್‌ಟಿ).	ಮೀಸಲು ಬೆಲೆ- ರೂ.1,10,50,000/- (ರೂಪಾಯಿ ಒಂದು ಕೋಟಿ ಹತ್ತು ಲಕ್ಷದ ಐವತ್ತು ಸಾವಿರಗಳು ಮಾತ್ರ) ಮುಂಗಡ ಹಣ ಠೇವಣಿ ರೂ.11,05,000/- (ರೂಪಾಯಿ ಹನ್ನೊಂದು ಲಕ್ಷದ ಐದು ಸಾವಿರಗಳು ಮಾತ್ರ) ಬಿಡ್ ಗುಣಾಂಕ: ರೂ.50,000/- (ರೂಪಾಯಿ ಐವತ್ತು ಸಾವಿರಗಳು ಮಾತ್ರ) ಅಥವಾ ಅದರ ಗುಣಾಂಕಗಳು

"ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್", ಬೆಂಗಳೂರು ಇವರ ಪರವಾಗಿ ಡಿಡಿ ಮೂಲಕ ಮುಂಗಡ ಹಣ ಪಾವತಿಸಬೇಕು ಅಥವಾ "ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್" ಖಾತೆ ಸಂಖ್ಯೆ 06410157020021 ಅಥವಾ ಐಎಫ್‌ಎಸ್‌ಸಿ ಸಂಖ್ಯೆ- KKBK0000958, ನಾರಿಮನ್ ಪಾಯಿಂಟ್, ಮುಂಬೈ, ಶಾಖಾ ಸಂಖ್ಯೆ 0641ಗೆ ನೆಫ್ಟ್/ಆರ್‌ಟಿಜಿಎಸ್ ಮೂಲಕ ಸಲ್ಲಿಸಬಹುದು.

ಆಸ್ತಿಯ ಮಾರಾಟಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಶ್ರೀ ಪ್ರದೀಪ್ ಕುಮಾರ್ (+91 7624983109, ಶ್ರೀ [illegible] ಶಂಕರ್ (+91 9742027742 & 08061563506), ಶ್ರೀ ರಾಜೇಂದರ್ ದಹಿಯಾ (+91 8448264515) ಮತ್ತು ಶ್ರೀ ಆಕಾಶ್ ಸಕ್ಸೇನಾ (+91 8860001910)

ಮಾರಾಟದ ನಿಯಮ ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ, ಒದಗಿಸಿದ ಲಿಂಕ್ https://www.kotak.com/en/bank-auctions.html ಗಳ ಕೋಟಕ್ ಮಹೀಂದ್ರ ಬ್ಯಾಂಕ್ ವೆಬ್‌ಸೈಟ್ ಅಂದರೆ www.kotak.com ಅಥವಾ https://kotakbank.auctiontiger.net ಗೆ ಭೇಟಿ ನೀಡಿ.

ದಿನಾಂಕ : 21-ಜನವರಿ-2020, ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ, ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್.,

ಗೌರವಾನ್ವಿತ ಸಾಲ ವಸೂಲಾತಿ ನ್ಯಾಯಾಧೀಕರಣದ ಸಮಕ್ಷಮದಲ್ಲಿ ಬೆಂಗಳೂರು

ಓ.ಎ. ನಂ. 789/2019

ಇವರ ನಡುವೆ:
ಕೆನರಾ ಬ್ಯಾಂಕ್ ...ಅರ್ಜಿದಾರರು
ಮತ್ತು
ಮೆ: ಮೆಟ್ರೋ ಫ್ಯಾಬ್-ಟೆಕ್ ಮತ್ತು ಮತ್ತೊಬ್ಬರು ...ಪ್ರತಿವಾದಿಗಳು

1993ರ ಸಾಲ ವಸೂಲಾತಿ ನ್ಯಾಯಾಧೀಕರಣ (ವಿಧಾನ) ದ ನಿಯಮಗಳಲ್ಲಿನ ನಿಯಮ 23(8)ರಡಿಯಲ್ಲಿ ಪ್ರತಿವಾದಿಗಳಿಗೆ ಜಾರಿಗೊಳಿಸಲಾದ ನೋಟೀಸು

ಆದಾಗ್ಯೂ, ಸಾಲ ವಸೂಲಾತಿ ನಿಯಮ 1993ರಡಿ ಬ್ಯಾಂಕ್‌ಗಳಿಗೆ ಮತ್ತು ಹಣಕಾಸು ಸಂಸ್ಥೆಗಳಿಗೆ ಸಾಲ ಬಾಕಿ ವಸೂಲಾತಿ ಕಾಯ್ದೆಯ ಸೆಕ್ಷನ್ 19 ರಡಿ ಅರ್ಜಿದಾರರು ಮೇಲ್ಕಾಣಿಸಿದ ಪ್ರತಿವಾದಿಗಳಾದ ನಿಮ್ಮ ವಿರುದ್ಧ ಅರ್ಜಿಯನ್ನು ಸಲ್ಲಿಸಿದ್ದು ಬಾಕಿ ಇರುವ ಮೊತ್ತ **ರೂ.20,37,718/- (ರೂಪಾಯಿ ಇಪ್ಪತ್ತು ಲಕ್ಷ ಮೂವತ್ತೇಳು ಸಾವಿರದ ಏಳುನೂರಾ ಹದಿನೆಂಟು ಮಾತ್ರ)** ಗಳನ್ನು ಪ್ರತಿ ವರ್ಷಕ್ಕೆ 12.40% (ಬಡ್ಡಿ 10.40% ಮತ್ತು 2% ದಂಡದ ಬಡ್ಡಿ) ದರದಲ್ಲಿ ಪ್ರಸ್ತುತ ಮತ್ತು ಭವಿಷ್ಯದ ಬಡ್ಡಿಯೊಂದಿಗೆ ಜಂಟಿಯಾಗಿ, ಹಲವಾರು ಮತ್ತು ವೈಯಕ್ತಿಕವಾಗಿ ಪಾವತಿಸಲು ಪ್ರತಿವಾದಿಗಳಿಗೆ ನಿರ್ದೇಶಿಸುವುದು. ಅರ್ಜಿಯ ದಿನಾಂಕದಿಂದ ಪೂರ್ತಿ ಹಣ ಸಂದಾಯವಾಗುವವರೆಗೆ ಮಾಸಿಕ ವಿಶ್ರಾಂತಿ ಮತ್ತು ಇತರ ಪರಿಹಾರಗಳು ಸೇರಿರುತ್ತವೆ.
ತಮಗೆ ಈ ಮೂಲಕ ನಿರ್ದೇಶಿಸುವುದೇನೆಂದರೆ ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಅಥವಾ ನ್ಯಾಯಾಧೀಕರಣ ನಿಗದಿಪಡಿಸಿದ ದಿನಾಂಕದಂದು ಅಂದರೆ **ದಿನಾಂಕ: 10/02/2020 ರಂದು ಬೆಳಗ್ಗೆ 10.30 ಗಂಟೆಗೆ** ತಾವು ನ್ಯಾಯಾಧೀಕರಣ ಮುಂದೆ ಖುದ್ದಾಗಿ ಹಾಜರಾಗಿ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ಯಾಕಾಗಿ ಮೇಲೆ ಕೋರಿದ ಪರಿಹಾರ ಮೊತ್ತವನ್ನು ಮಂಜೂರು ಮಾಡಬಾರದು ಎಂಬುದಕ್ಕೆ ಸಮಜಾಯಿಷಿಯನ್ನು

ಸಾಲ ವಸೂಲಾತಿ ನ್ಯಾಯಾಧೀಕರಣ-1 ರ ಸಮಕ್ಷಮದಲ್ಲಿ

ಎಲ್‌ಐಸಿ ಜೀವನ್ ಮಂಗಳ್ ಕಟ್ಟಡ, ಮೊದಲನೆ ಮಹಡಿ,
ನಂ.4, ರೆಸಿಡೆನ್ಸಿ ರಸ್ತೆ, ಬೆಂಗಳೂರು

ಓ.ಎ.ನಂ.790/2019

ಇವರ ನಡುವೆ
ಕೆನರಾ ಬ್ಯಾಂಕ್ ...ವಾದಿ
ಮತ್ತು
ಶ್ರೀ ಸತೀಶ್ ಜಿ. ಮತ್ತು ಮತ್ತೊಬ್ಬರು ... ಪ್ರತಿವಾದಿಗಳು

1993ರ ಸಾಲ ವಸೂಲಾತಿ ನ್ಯಾಯಾಧೀಕರಣ (ವಿಧಾನ)ದ ನಿಯಮಗಳಲ್ಲಿನ, ನಿಯಮ 23(8)ರಡಿಯಲ್ಲಿ ಪ್ರತಿವಾದಿಗಳಿಗೆ ಜಾರಿಗೊಳಿಸಲಾದ ನೋಟೀಸು

ಆದಾಗ್ಯೂ, 1993ರ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಬಾಕಿಯಿರುವ ಸಾಲ ವಸೂಲಾತಿ ಕಾಯ್ದೆಯ ಸೆಕ್ಷನ್ 19ರಡಿಯಲ್ಲಿ ಅರ್ಜಿದಾರರು ನಿಮ್ಮಿಂದ ಬಾಕಿಯಿರುವ ಸಾಲದ ಮೊತ್ತ **ರೂ. 13,93,466/- (ರೂಪಾಯಿ ಹದಿಮೂರು ಲಕ್ಷ, ತೊಂಬತ್ತಮೂರು ಸಾವಿರದ ನಾಲ್ಕು ನೂರಾ ಅರವತ್ತ ಆರು ಮಾತ್ರ)** ಜೊತೆಗೆ ಸಾಲದ ಅವಧಿಯಲ್ಲಿ 11.65% ಬಡ್ಡಿ (9.65% ಮತ್ತು ದಂಡದ ಬಡ್ಡಿ ದರ2%) ಪ್ರತಿವಾದಿಗಳು ಒಟ್ಟಿಗೆ ಪಾವತಿಸುವಂತೆ ಮಾಸಿಕ ಸಂಯೋಜಿತ ಮತ್ತು ಅದರೊಂದಿಗೆ ಪ್ರಸ್ತುತ ಮತ್ತು ಮುಂದಿನ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲಾತಿ ಮಾಡುವ ಸಲುವಾಗಿ ನಿಮ್ಮ ವಿರುದ್ಧ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಿಮಗೆ ಈ ಮೂಲಕ ನಿರ್ದೇಶಿಸುವುದೇನೆಂದರೆ ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಅಥವಾ **ದಿ: 10/02/2020 ರಂದು ಬೆಳಗ್ಗೆ 10.30 ಗಂಟೆಗೆ** ಖುದ್ದಾಗಿ ನೀವಾಗಲೀ/ ವಕೀಲರ ಮೂಲಕವಾಗಲಿ ಹಾಜರಾಗಿ ಯಾಕಾಗಿ ಮೇಲೆ ಕೋರಿದ ಪರಿಹಾರ ಮೊತ್ತವನ್ನು ಮಂಜೂರು ಮಾಡಬಾರದು ಎಂಬುದಕ್ಕೆ ಸಮಜಾಯಿಷಿಯನ್ನು [illegible]

ಸಿದ್ಧಗಂಗಾಶ್ರೀಗಳ ಪುಣ್ಯಸ್ಮರಣೆ

ಸಂ.ಕ.ಸಮಾಚಾರ ನಂದಗುಡಿ

ನಂದಗುಡಿಯಲ್ಲಿ ವೀರಶೈವ ಸಮಾಜದವರು ತ್ರಿವಿಧ ದಾಸೋಹಿ,ಡಾ. ಶಿವಕುಮಾರ ಮಹಾ ಸ್ವಾಮೀಜಿಗಳ ಪ್ರಥಮ ಪುಣ್ಯ ಸ್ಮರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ಗುಚ್ಛ ಸಲ್ಲಿಸಿ ಭಕ್ತಿ ಪೂರ್ವಕ ನಮನ ಸಲ್ಲಿಸಿದರು. ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಿತು. ವೀರಶೈವ ಮುಖಂಡರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.



ಹಲ್ಲೆಕೋರರ ವಿರುದ್ಧ ಕ್ರಮಕ್ಕೆ ಒತ್ತಾಯ

ಸಂಕ ಸಮಾಚಾರ ಕನಕಪುರ

ಸಾಮಾಜಿಕ ಹೋರಾಟಗಾರರ ಮೇಲೆ ಹಲ್ಲೆಗೆ ಯತ್ನಿಸಿರುವುದು ಖಂಡನೀಯವಾಗಿದೆ. ಹಲ್ಲೆಕೋರರ ವಿರುದ್ಧ ಕೂಡಲೇ ಕಾನೂನು ಕ್ರಮ ಜರುಗಿಸುವಂತೆ ನಾಗರಿಕ ಹಕ್ಕು ಹೋರಾಟ ವೇದಿಕೆಯ ಜಿಲ್ಲಾ ಸಂಚಾಲಕ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ್ ಆಗ್ರಹಿಸಿದ್ದಾರೆ.

ಸ್ಥಾಪನೆ : 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್